# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 730/2011

| | ಪ್ರಾಸಾಃ- | 1 |
|---|---|---|

| | |
|---|---|
| ಹೆಸರು | ವೆಂಕಟೇಗೌಡ |
| ತಂದೆಯ ಹೆಸರು | ಲೇಟ್ ವೆಂಕಟಪ್ಪ |
| ವಯಸ್ಸು | 52 |
| ಉದ್ಯೋಗ | ಎಎಸ್ಐ, ಕನಕಪುರ ಪುರ ಪೊಲೀಸ್ ಠಾಣೆ |
| ವಿಳಾಸ | ಕನಕಪುರ |

- - - - - - - - - - - - - - - - - - - - - - - - - - - - - -

**ಕಲಂ 299 ದಂಡ ಪ್ರಕ್ರಿಯೆ ಸಂಹಿತೆ ಅಡಿಯಲ್ಲಿ ಸಾಕ್ಷಿ ವಿಚಾರಣೆ**

**ದಿಃ17.02.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ಜೂನ್ 2022 ರಿಂದ ಇಲ್ಲಿಯವರೆಗೂ ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ 5ನೇ ಆರೋಪಿತನ ವಿರುದ್ದ ಉದ್ಘೋಷಣಯನ್ನು ಮಾಡಬೇಕೆಂದು, ನ್ಯಾಯಾಲಯದಿಂದ ನಮಗೆ ವಾರೆಂಟ್ ಬಂದಿರುತ್ತದೆ.

ದಿನಾಂಕ.21.01.2023 ರಂದು ಬೆಳಿಗ್ಗೆ 10:00 ರಿಂದ 11:00 ಗಂಟೆ ಸಮಯದಲ್ಲಿ 5ನೇ ಆರೋಪಿತನಾದ ಕುಮಾರ ಉಃ ಆಚಾರಿ ಉಃ ಮೂರ್ತಿ ಬಿನ್ ವೆಂಕಟೇಶ್ ಆಚಾರಿ ರವರಿಗೆ ಸಂಬಂಧಿಸಿದಂತೆ ಕನಕಪುರ ನಗರದ ನೀಲಕಂಠೇಶ್ವರ ಬಡಾವಣೆ, ಲಕ್ಷ್ಮಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ 5ನೇ ಆರೋಪಿ ವಾಸವಿದ್ದ ಸ್ಥಳದಲ್ಲಿ ಪಂಚರಾದ ರಾಜಮ್ಮ ಮತ್ತು

ರಮೇಶ್ ರವರ ಸಮಕ್ಷಮ ಉದ್ಘೋಷಣೆ ಮಾಡಿರುತ್ತೇನೆ. ಉದ್ಘೋಷಣ ವಾರೆಂಟ್ ಗ್ರಾಮದ ಮುಖ್ಯ ಬೀದಿಗಳಲ್ಲಿ ಟಂಟಂ ಮಾಡಿಸಿ ಉದ್ಗೋಷಣೆ ಪ್ರತಿಯನ್ನು ಸಾರ್ವಜನಿಕ ಆಸ್ಪತ್ರೆ, ಬಸ್ ನಿಲ್ದಾಣದ ಬಳಿ ಅಂಟಿಸಿರುತ್ತೇನೆ. ಆ ಬಗ್ಗೆ ಸ್ಥಳದಲ್ಲಿ ಪಂಚನಾಮವನ್ನು ಬರೆದಿರುತ್ತೇನೆ. ನಂತರ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸದರಿ ಉದ್ಗೋಷಣೆ ಪಂಚನಾಮೆ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮರುವಿಚಾರಣೆ ಃಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಓ ಹೇ ಕೇ ಸ ಇ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.